**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 116/2020**

| | | |
|---|---|---|
| ಸಾಕ್ಷಿದಾರರ ಹೆಸರು | : ಶಿವದತ್ | *ಪ್ರಮಾಣ ಮಾಡಿದ ದಿನಾಂಕ:* |
| ತಂದೆ ಹೆಸರು | : ಶಶಿಕುಮಾರ | **04.01.2023** |
| ವಯಸ್ಸು | : 28 ವರ್ಷ | |
| ವೃತ್ತಿ | : ಖಾಸಗಿ ಕೆಲಸ | ಪಿಡಬ್ಲ್ಯೂ : 07 |
| ವಾಸ ಸ್ಥಳ | : ಮೈಸೂರು | ಸಿಡಬ್ಲ್ಯೂ : 09 |

*ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ:*

**ನನಗೆ ಚಾಸಾ-10ರವರ ಪರಿಚಯ ಇಲ್ಲ. ನ್ಯಾಯಾಲಯದೆದುರು ವಿಸಿ ಮೂಲಕ ಹಾಜರಿರುವ 1ನೇ ಆರೋಪಿಯನ್ನು ನಾನು ನೋಡಿಲ್ಲ. 1ನೇ ಆರೋಪಿ ಕಡೆಯಿಂದ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈಗ ತೋರಿಸಿದ ಮಹಜರನಲ್ಲಿ ನನ್ನ ರುಜು ಇರುತ್ತದೆ. ಮಹಜರನ್ನು ನಿಪಿ-7 ಎಂದು, ಸಾಕ್ಷಿ ರುಜುವನ್ನು ನಿಪಿ-7(ಎ) ಎಂದು ಗುರುತಿಸಿದೆ. ಅದರಲ್ಲಿರುವ ಮಾಹಿತಿಗಳು ಗೊತ್ತಿಲ್ಲ. ಈಗ ಮೂರು ವರ್ಷದ ಹಿಂದೆ ನಜರಾಬಾದ್ ಪೊಲೀಸರು ಠಾಣೆಯಲ್ಲಿ ಪಡೆದುಕೊಂಡಿದ್ದರು. ನೋಟಿಸ್‌ನಲ್ಲಿ ಸಾಕ್ಷಿ ರುಜು ಗುರುತಿಸಿದ್ದು, ಅದನ್ನು ನಿಪಿ-8 ಎಂದು, ಸಾಕ್ಷಿ ರುಜುವನ್ನು ನಿಪಿ-8(ಎ) ಎಂದು ಗುರುತಿಸಿದೆ. ಈಗ ತೋರಿಸಿದ ಸೀಲ್ ಮಾಡಿದ ಮು.ಮಾ. ಮೇಲೆ ಇರುವ ಚೀಟಿಯಲ್ಲಿ ನನ್ನ ರುಜು ಇರುತ್ತದೆ. ಇದರ ಒಳಗೆ ಏನಿದೆ ಎಂದು ಗೊತ್ತಿಲ್ಲ.**

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-*

**2. ದಿನಾಂಕ 13.02.2019ರಂದು ನಜರಾಬಾದ್ ಪೊಲೀಸರು ನನಗೆ ನೋಟಿಸ್ ಕೊಟ್ಟು ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ 1ನೇ ಆರೋಪಿ ಹಾಜರಿದ್ದು ನನ್ನನ್ನು ಮತ್ತು ಪೊಲೀಸರನ್ನು**

**ರಾಘವೇಂದ್ರ ನಗರದ ಸ್ಮಶಾನದ ಬಳಿ ಕರೆದುಕೊಂಡು ಹೋಗಿ ಪೊದೆಯಲ್ಲಿಟ್ಟಿದ್ದ ಪೈಪನ್ನು ಹಾಜರುಪಡಿಸಿದ್ದ ಎನ್ನುವುದು, ಅದನ್ನು ಪೊಲೀಸರು ಮಹಜರ ಬರೆದು ನನ್ನ ರುಜು ಪಡೆದು ಕೊಂಡರು ಎಂದರೆ ಸರಿಯಲ್ಲ. ಅದನ್ನು ಪೊಲೀಸರು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು : ಆರೋಪಿಗಳ ಪರ ವಕೀಲರಿಂದಃ- ಇಲ್ಲ**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**04.01.2023.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.